**ದಿನಾಂಕಃ06.11.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.**

**ಪಾಟೀಸವಾಲುಃ ಶ್ರೀ. ವಕೀಲರಿಂದ ಅರ್ಜಿದಾರರ ಪರವಾಗಿ.**

ಈ ಅರ್ಜಿಯನ್ನು ಮಾನ್ಯ ಮಾಡಿದರೆ ನನಗೆ ತೊಂದರೆಯಾಗುತ್ತದೆ. ಅರ್ಜಿದಾರರು ಈಗಲೂ ಸದರಿ ಸ್ವತ್ತಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಮೂಲ ಹೆಚ್.ಆರ್.ಸಿ ಅರ್ಜಿಯಲ್ಲಿ ಈ ಅರ್ಜಿದಾರರ ಗಮನಕ್ಕೆ ಬರದೆ ಸದರಿ ಹೆಚ್.ಆರ್.ಸಿಯನ್ನು ಏಕತರ್ಫಿಯಾಗಿ ಆದೇಶ ಪಡೆದುಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವಾಗಲೂ ಈ ಮೂಲ ಪ್ರಕರಣದ ನೋಟೀಸ್ ತಲುಪಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಫ್ಯಾಬ್ರಿಕೇಷನ್(ಸ್ಟ್ರೀಲ್) ಕೆಲಸ ಮಾಡುತ್ತಿದ್ದಾರೆ. ಅರ್ಜಿದಾರರು ಸ್ವೀಪರ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಹೇಳಿರುವ ಕಾರಣಗಳೆಲ್ಲವನ್ನು ಒಪ್ಪಿಕೊಂಡರೆ ಈ ಪ್ರಕರಣವನ್ನು ಸಲ್ಲಿಸುವುದಕ್ಕೆ ತಡವಾಗಿರುವ ಕಾರಣಗಳನ್ನು ನಾನು ಮನ್ನಿಸಬಹುದು ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪ್ರತದ 3 ನೇ ಖಂಡಿಕೆಯಲ್ಲಿ ದಿಃ19.06.2021 ರಂದು ಅಂತಿಮ ಆದೇಶದ ದೃಢೀಕೃತ ನಕಲಿಗಾಗಿ ಅರ್ಜಿಯನ್ನು ಸಲ್ಲಿಸಲಾಗಿತ್ತು ಎಂದು ತಿಳಿಸಿದ್ದೇನೆ ಎಂದರೆ ಅದು ದಿಃ19.06.2021 ಎಂದು ತಪ್ಪಾಗಿ ನಮೂದಾಗಿದ್ದು, ದಿಃ19.06.2019 ಎಂದು ತಿದ್ದುಪಡಿ ಹಾಗಬೇಕಾಗಿರುತ್ತದೆ. ಅಂದರೆ ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಆದ್ದರಿಂದ ಅರ್ಜಿದಾರರು ದಿಃ19.06.2021 ರಂದು ಪ್ರತಿಯನ್ನು ಪಡೆದ ಕಾರಣ ಈ ಅರ್ಜಿಯನ್ನು ಸಲ್ಲಿಸುವಲ್ಲಿ ಯಾವುದೇ ತಡ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ಸಾಕ್ಷಿಯ ಪ್ರಕಾರವಾಗಿ ದಿಃ19.06.2021 ರಿಂದ ನಾನು ತಡವಾಗಿದಕ್ಕೆ ಕಾರಣವನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ ಪ್ರಕಾರವಾಗಿ ಈ ಅರ್ಜಿಯನ್ನು ಸಲ್ಲಿಸಲು 17 ದಿನಗಳ ತಡ ಆಗಿದೆ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಇತರೆ ವಿಚಾರಗಳೆಲ್ಲಾ ನನ್ನ ಯೋಚನೆಯಂತೆ ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ದಿಃ19.06.2021 ರಂದು ಅರ್ಜಿದಾರರು ದೃಢೀಕೃತ ನಕಲಿಗಾಗಿ ಅರ್ಜಿ ಸಲ್ಲಿಸಿದ್ದಾರೆ ಎಂದು ಹೇಳುವ ಮೂಲಕ ನಾನು ಅರ್ಜಿದಾರರ ಪ್ರಕರಣವನ್ನು ಒಪ್ಪಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಈ ಅರ್ಜಿಯನ್ನು ಸಲ್ಲಿಸುವುದರಲ್ಲಿ ಯಾವುದೇ ತಡವಾಗಿರುವುದಿಲ್ಲವೆಂದು ನಾನು ಒಪ್ಪಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
24 ನೇ ಎಸಿಎಂಎಂ ಮತ್ತು ಸದಸ್ಯರು ಎಂಎಸಿಟಿ.

5 ನೇ ಅಪರ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
24 ನೇ ಎಸಿಎಂಎಂ ಮತ್ತು ಸದಸ್ಯರು ಎಂಎಸಿಟಿ.